ಕಮಿಟಿ ಅಥವಾ ಹೈಪವರ್ ಕಮಿಟಿ ಎಂದು ಮಾಡಿದ್ದರು. ಇದೇ ಮೊದಲ ಬಾರಿಗೆ ಈ ವರ್ಷದಲ್ಲಿ ಅಂಥ ಹೈಪವರ್ ಕಮಿಟಿಯನ್ನು ಮಾಡಿದ್ದರಿಂದ ಅದು ಪೂರ್ಣವಾಗಲು ಸ್ವಲ್ಪ ತಡವಾಯಿತು. ಈಗಾಗಲೆ ಎಲ್ಲಾ ಆಸ್ಪತ್ರೆಗಳಿಗೆ ಔಷಧಿಯನ್ನು ಒದಗಿಸಿದ್ದೇವೆ.

ಅಧ್ಯಕ್ಷರು:- ಬಹಳ ಆಸ್ಪತ್ರೆಗಳಿಗೆ ಔಷಧಿಗಳು ಬಂದಿಲ್ಲವೆಂದು ನಾನು ಕೇಳಿದ್ದೇನೆ.

ಶ್ರೀ ಬಸವರಾಜ ಪಾಟೀಲ್:- ಅಧ್ಯಕ್ಷರೇ, ಅದನ್ನು ತಮ್ಮ ಗಮನಕ್ಕೆ ಈಗಾಗಲೇ ತಂದಿದ್ದೇನೆ. ತಡವಾಗಿತ್ತು ಆದರೆ ಈಗಾಗಲೇ ಎಲ್ಲಾ ಆಸ್ಪತ್ರೆಗಳಿಗೆ ಔಷಧಿಯನ್ನು ಒದಗಿಸಲಾಗಿದೆ.

ಗುಬ್ಬಿ ತಾಲ್ಲೂಕು ಸಿ. ಎಸ್. ಪುರ ರಸ್ತೆಯ ದುರಸ್ತಿ

ಶ್ರೀ ಜಿ. ಎಸ್. ಶಿವಸಂಜಪ್ಪ (ಗುಬ್ಬಿ):- ಗುಬ್ಬಿ ತಾಲ್ಲೂಕು ಗುಬ್ಬಿ ನಗರದಿಂದ ಆಂದರೆ ಬಿ. ಹೆಚ್. ರಸ್ತೆಯಿಂದ ಗುಬ್ಬಿ ಸಿ. ಎಸ್. ಪುರ ರಸ್ತೆ ಹಾದು ಹೋಗುತ್ತಿದ್ದು ಗುಬ್ಬಿ ನಗರದ ಪ್ರಸಿದ್ಧ ದೇವಸ್ಥಾನವಾದ ಶ್ರೀ ಚೆನ್ನಬಸವೇಶವೇಶ್ವರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಹೋಗುವ ಸಿ. ಎಸ್. ಪುರ ರಸ್ತೆಯ ಸುಮಾರು ೩ ಕಿ. ಮೀ. ಪೂರ್ಣ ಶಿಥಿಲವಾಗಿದ್ದು ನೂರಾರು ಬಸ್ಸುಗಳು, ಲಾರಿಗಳು, ಕಾರುಗಳು ಮತ್ತು ದ್ವಿಚಕ್ರ ವಾಹನಗಳು ಹಾಗೂ ಎತ್ತಿನ ಗಾಡಿಗಳು ಓಡಾಡಲು ತುಂಬಾ ತೊಂದರೆಯಾಗಿರುತ್ತದೆ. ಇದನ್ನು ರಿಪೇರಿ ಮಾಡಬೇಕೆಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಗುಬ್ಬಿಯಿಂದ ಬೆಂಗಳೂರಿನವರೆವಿಗೂ ದೂರು ಕೊಟ್ಟರೂ ಸರಿಪಡಿಸಿರುವುದಿಲ್ಲ. ಮೇಲೆ ಹೇಳಿದ ದೇವಸ್ಥಾನಕ್ಕೆ ಪ್ರತಿ ದಿವಸ ಸಾವಿರಾರು ಭಕ್ತಾದಿಗಳು ನೂರಾರು ವಾಹನಗಳಲ್ಲಿ ಬರುತ್ತಿದ್ದು ತುಂಬಾ ತೊಂದರೆಯಾಗಿರುತ್ತದೆ. ಈ ರಸ್ತೆಯನ್ನು ತ್ವರಿತವಾಗಿ ರಿಪೇರಿ ಮಾಡಿಸಿ ಸಾರ್ವಜನಿಕರು ಹಾಗೂ ಭಕ್ತಾದಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಲೋಕೋಪಯೋಗಿ ಇಲಾಖೆ ಮಂತ್ರಿಗಳನ್ನು ಒತ್ತಾಯ ಪೂರ್ವಕವಾಗಿ ವಿನಂತಿಸುತ್ತೇನೆ. ಈ ರಸ್ತೆಯು ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯಾಗಿರುತ್ತದೆ.

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು):- ಈ ಕೆಲಸ ಆಗಲೇ ಪೂರ್ಣಗೊಂಡಿದೆ. ಗುಬ್ಬಿ ತಾಲ್ಲೂಕು ಗುಬ್ಬಿ ನಗರದಿಂದ ಆಂದರೆ ಬಿ. ಹೆಚ್. ರಸ್ತೆಯಿಂದ ಗುಬ್ಬಿ ಸಿ. ಎಸ್. ಪುರ ರಸ್ತೆಯ ಗುಬ್ಬಿ ನಗರದ ಪ್ರಸಿದ್ಧ ದೇವಸ್ಥಾನವಾದ ಶ್ರೀ ಚೆನ್ನಬಸವೇಶ್ವರಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಹಾದು ಹೋಗುತ್ತಿದ್ದು ಇದು ೩ ಕಿ. ಮೀ. ಉದ್ದವಿದೆ. ಈ ಭಾಗದ ರಸ್ತೆಯ ಪೈಕಿ ೧ ಕಿ. ಮೀ. ರಸ್ತೆಯು ಸುಸ್ಥಿತಿಯಲ್ಲಿದ್ದು ಉಳಿದ ೨ ಕಿ. ಮೀ. ಉದ್ದವು ಶಿಥಿಲವಾಗಿದ್ದಿತು. ಈ ಶಿಥಿಲಗೊಂಡಿದ್ದ ೨ ಕಿ. ಮೀ. ರಸ್ತೆಯನ್ನು ೧.೬೫ ಲಕ್ಷ ರೂ. ಗಳ ವೆಚ್ಚದಲ್ಲಿ ಮರು ಡಾಂಬರೀಕರಣ ಕಾಮಗಾರಿಯನ್ನು ತೆಗೆದುಕೊಂಡು ೧೯-೩-೧೯೯೨ರಂದು ಸಂಪೂರ್ಣ ಮಾಡಲಾಗಿದೆ. ಈಗ ಈ ಭಾಗದ ರಸ್ತೆಯು ಸುಸ್ಥಿತಿಯಲ್ಲಿದ್ದು ಸಂಚಾರಕ್ಕೆ ಯಾವುದೇ ತೊಂದರೆ ಇರುವುದಿಲ್ಲ.

ಬೆಂಗಳೂರು ದಕ್ಷಿಣ ತಾಲ್ಲೂಕು ಕೋಲೂರು ಸರ್ಕಾರಿ ಶಾಲೆಯಲ್ಲಿ ಮಕ್ಕಳು ಪ್ರವೇಶ ಮಾಡಿದ ಕೂಡಲೇ ಪ್ರಜ್ಞೆ ತಪ್ಪಿ ಬೀಳುತ್ತಿರುವ ಬಗ್ಗೆ

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ):- ಬೆಂಗಳೂರು ದಕ್ಷಿಣ ತಾಲ್ಲೂಕು ಕೋಲೂರು ಸರ್ಕಾರಿ ಶಾಲೆಯಲ್ಲಿ ಕಳೆದ ಐದು ದಿನಗಳಿಂದ ಮಕ್ಕಳು ಪ್ರವೇಶ ಮಾಡಿದ ಕೂಡಲೇ ಪ್ರಜ್ಞೆ ತಪ್ಪಿ ಕೆಳಗೆ ಬೀಳುತ್ತಿರುವುದರಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಈ ಸೂಚನೆ.